# ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 29.11.2023ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2023ನೇ ಸಾಲಿನ ಏಳನೆಯ ಸಾಮಾನ್ಯ ಸಭೆಯ ನಡವಳಿಗಳು

**<u>ಉಪಸ್ಥಿತರು:</u>**

| ಕ್ರ.ಸಂ. | | | ಸಹಿ |
|---|---|---|---|
| 1. | ಪ್ರೊ. ಜಯರಾಜ್ ಅಮೀನ್<br>ಕುಲಪತಿಗಳು | ಅಧ್ಯಕ್ಷರು | |
| 2. | ಡಾ. ರಾಮೇ ಗೌಡ ಎಂ.,<br>ಜಂಟಿ ನಿರ್ದೇಶಕರು<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 3. | ಡಾ. ಎಸ್. ಬಿ. ಎಂ. ಪ್ರಸನ್ನ | ಸದಸ್ಯರು | |
| 4. | ಡಾ. ಕೆ. ಸಿ. ಮಹದೇಶ | ಸದಸ್ಯರು | |
| 5. | ಪ್ರೊ. ಜಯರಾಜ್ ಅಮೀನ್<br>ಡೀನರು, ಕಲಾ ನಿಕಾಯ | ಸದಸ್ಯರು | |
| 6. | ಶ್ರೀ ಕೃಷ್ಣಪ್ರಸಾದ್ ಕೆ.ಎನ್ | ಸದಸ್ಯರು | |
| 7. | ಡಾ.ರಾಜೇಂದ್ರ ಎಸ್. ನಾಯಕ್ | ಸದಸ್ಯರು | |
| 8. | ಶ್ರೀಮತಿ ಸಮೀರ ಕೆ. ಎ. | ಸದಸ್ಯರು | |
| 9. | ಶ್ರೀ ಫಾದರ್ ಮೈಕಲ್ ಸಂತುಮಯೋರ್ | ಸದಸ್ಯರು | |
| 10. | ಡಾ. ಸಿಪ್ರಿಯನ್ ಮೊಂತೇರೋ<br>ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ,<br>ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ | ಸದಸ್ಯರು | |
| 11. | ಪ್ರೊ. ರಾಜುಕೃಷ್ಣ ಚಲಣ್ಣವರ್<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು | |
| 12. | ಪ್ರೊ. ವೈ. ಸಂಗಪ್ಪ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು | |
| 13. | ಶ್ರೀ ರಾಜು ಕೆ., ಕೆ.ಎ.ಎಸ್.<br>ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ | |

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

**I. ನಡವಳಿಗಳ ದೃಢೀಕರಣ:**

ದಿನಾಂಕ 12.10.2023ರಂದು ನಡೆದ ಸಿಂಡಿಕೇಟಿನ 2023ನೇ ಸಾಲಿನ ಆರನೆಯ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ

**ದೃಢೀಕರಿಸಲಾಯಿತು.**

**II. ಅನುಸರಣಾ ವರದಿಯ ಅನುಮೋದನೆ**

ದಿನಾಂಕ 24.08.2023ರಂದು ನಡೆದ ಸಾಲಿನ ಐದನೇ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

**ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.**

**III. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು**

**ಕಾರ್ಯಸೂಚಿ** : **ಎಸಿಸಿ: ಸಾ.ಸ.7:1(2023)**

**ವಿಷಯ** : ಮಂಗಳೂರು ವಿಶ್ವವಿದ್ಯಾನಿಲಯದ 42ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದ ಬಗ್ಗೆ.

ನಿರ್ಣಯ : ಮುಂದಿನ ಸಿಂಡಿಕೇಟ್ ಸಭೆಗೆ ಮುಂದೂಡಲಾಯಿತು

**ಕಾರ್ಯಸೂಚಿ** : **ಎಸಿಸಿ:ಸಾ.ಸ.7:2(2023)**

**ವಿಷಯ** : ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ ಇಲ್ಲಿನ ಬಿ.ಕಾಂ. ಕಾರ್ಯಕ್ರಮದ ಹೆಚ್ಚುವರಿ ವಿಭಾಗಕ್ಕೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ** : ಅನುಮೋದಿಸಲಾಯಿತು

**ಕಾರ್ಯಸೂಚಿ** : **ಸಿಬ್ಬಂದಿ: ಸಾ.ಸ.7:3(2023)**

**ವಿಷಯ** : ಯುಜಿಸಿ ನಿಯಮಾವಳಿ 2016/2018ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ/ ಸ್ನಾತಕೋತ್ತರ ಕೇಂದ್ರ / ಘಟಕ ಕಾಲೇಜುಗಳ ಬೋಧಕರಿಗೆ ವೃತ್ತಿ ಪದೋನ್ನತಿ-ಸ್ಕ್ರೀನಿಂಗ್-ಕಂ-ಇವ್ಯಾಲ್ಯುವೇಶನ್/ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ** : ಅನುಮೋದಿಸಲಾಯಿತು.

**ಕಾರ್ಯಸೂಚಿ** : **ಸಿಬ್ಬಂದಿ: ಸಾ.ಸ.7:4(2023)**

**ವಿಷಯ** : ಯುಜಿಸಿ ನಿಯಮಾವಳಿ 2018ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಿಗೆ ಹಿರಿಯ ಪ್ರಾಧ್ಯಾಪಕರಾಗಿ ಪದೋನ್ನತಿ - ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ

**ನಿರ್ಣಯ** : ಡೀನರ ಪತ್ರದ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಯಿತು. ಡಾ.ಕರುಣಾಕರ್ ಎನ್. ಇವರಿಗೆ ಹಿರಿಯ ಪ್ರಾಧ್ಯಾಪಕರಾಗಿ ಪದೋನ್ನತಿಗೆ ಸಂಬಂಧಿಸಿ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ** : **ಸಿಬ್ಬಂದಿ: ಸಾ.ಸ.7:5(2023)**

**ವಿಷಯ** : ಡಾ.ಬಿ.ಎಸ್. ಶ್ರೀನಾಥ್, ಸಹಾಯಕ ಪ್ರಾಧ್ಯಾಪಕರು, ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಯ ಹಕ್ಕುಸ್ವಾಮ್ಯವನ್ನು ಎರಡು ವರ್ಷಗಳವರೆಗೆ ಕಾಯ್ದಿರಿಸುವ ಕುರಿತು.

**ನಿರ್ಣಯ** : ಈ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಯಿತು. ಡಾ.ಬಿ.ಎಸ್. ಶ್ರೀನಾಥ್., ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ಎರಡು ವರ್ಷಗಳ ಬದಲು ಬಿಡುಗಡೆಗೊಂಡ ದಿನಾಂಕದಿಂದ ಆರು ತಿಂಗಳ ಅವಧಿಗೆ ಹಕ್ಕುಸ್ವಾಮ್ಯವನ್ನು ಕಾಯ್ದಿರಿಸಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ** : **ಸಿಬ್ಬಂದಿ: ಸಾ.ಸ.7:6(2023)**

**ವಿಷಯ** : ಡಾ. ಅಶೋಕ್ ಆಂಟೋನಿ ಡಿ'ಸೋಜ, ಪ್ರಾಧ್ಯಾಪಕರು, ಸಮಾಜ ಕಾರ್ಯ ವಿಭಾಗ, ರಾಣಿಚನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ ಇವರು ಅಂತರ್ ವಿಶ್ವವಿದ್ಯಾನಿಲಯ

ವರ್ಗಾವಣೆಯಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಗೆ ಸಂಬಂಧಿಸಿ ನಿರಾಕ್ಷೇಪಣಾ ಪತ್ರ ಕೋರಿ ಸಲ್ಲಿಸಿರುವ ಮನವಿಯ ಬಗ್ಗೆ.

**ನಿರ್ಣಯ** : ನಿರಾಕ್ಷೇಪಣಾ ಪತ್ರವನ್ನು ನೀಡುವ ಬಗ್ಗೆ ಸಿಂಡಿಕೇಟು ಸಭೆಯಲ್ಲಿ ನಿರಾಕರಿಸಲಾಯಿತು.

**ಕಾರ್ಯಸೂಚಿ** : **ಡಿಇವಿ: ಸಾ.ಸ.7:7(2023)**

**ವಿಷಯ** : CARER ಕೇಂದ್ರದ ಪ್ರಯೋಗಾಲಯದಲ್ಲಿರುವ Quantulus-1220 Liquid Scintillation Counting (LSC) ಉಪಕರಣಕ್ಕೆ ಅಗತ್ಯವಿರುವ QT Cooling System ನ ಖರೀದಿ ಇಂಡೆಂಟಿನ ಘಟನೋತ್ತರ ಮಂಜೂರಾತಿ ಬಗ್ಗೆ.

**ನಿರ್ಣಯ** : ಅನುಮೋದಿಸಲಾಯಿತು.

**ಕಾರ್ಯಸೂಚಿ** : **ಪ.ಜಾತಿ.ಪ.ಪಂ.ಘಟಕ : ಸಾ.ಸ.7:8(2023)**

**ವಿಷಯ** : ದಿನಾಂಕ 02.09.2023ರಂದು ನಡೆದ ಪರಿಶಿಷ್ಟಜಾತಿ ಪರಿಶಿಷ್ಟಪಂಗಡ ಘಟಕಗಳ ಸ್ಥಾಯಿ ಸಮಿತಿ ಸಭೆಯ ನಡವಳಿಯನ್ನು ಅನುಷ್ಠಾನಗೊಳಿಸುವ ಬಗ್ಗೆ.

**ನಿರ್ಣಯ** : ಸ್ಥಾಯಿ ಸಮಿತಿ ಸಭೆಯ ನಡವಳಿಯನ್ನು ಪುನರ್ ಪರಿಶೀಲಿಸಿ, ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸುವಂತೆ ನಿರ್ಣಯಿಸಲಾಯಿತು.

**ಕಾರ್ಯಸೂಚಿ** : **ಸಿಂಡಿಕೇಟು: ಸಾ.ಸ.7:9 (2023)**

**ವಿಷಯ** : ಸ್ನಾತಕೋತ್ತರ ಮಾನವಪ್ರಜ್ಞೆ ಹಾಗೂ ಯೋಗ ವಿಜ್ಞಾನ ಅಧ್ಯಯನ ಮಂಡಳಿಯನ್ನು "ಸ್ನಾತಕೋತ್ತರ ಮಾನವಪ್ರಜ್ಞೆ ಹಾಗೂ ಯೋಗವಿಜ್ಞಾನ ಮತ್ತು ಪದವಿಮಟ್ಟದ ಯೋಗವಿಜ್ಞಾನ ಸಂಯುಕ್ತ ಅಧ್ಯಯನ ಮಂಡಳಿ" ಎಂದು ಮರು ನಾಮಕರಣಗೊಳಿಸಿ ರಚಿಸುವ ಬಗ್ಗೆ.

**ನಿರ್ಣಯ** : ಅನುಮೋದಿಸಲಾಯಿತು.

**ಕಾರ್ಯಸೂಚಿ** : **ಸಿಂಡಿಕೇಟು: ಸಾ.ಸ.7:10 (2023)**

**ವಿಷಯ** : ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

**ನಿರ್ಣಯ** : ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ದಿನಾಂಕ

01.01.2024ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಈ ಕೆಳಗಿನಂತೆ ಅಧ್ಯಕ್ಷರುಗಳನ್ನು ನೇಮಕಾತಿ ಮಾಡಲಾಯಿತು.

| ಕ್ರ. ಸಂ. | ಸ್ನಾತಕೋತ್ತರ ಅಧ್ಯಯನ ವಿಭಾಗ | ಅಧ್ಯಕ್ಷರ ಹೆಸರು |
|---|---|---|
| 1. | ಸಮಾಜ ಶಾಸ್ತ್ರ | ಪ್ರೊ. ವಿನಯ್ ರಜತ್ (ದಿನಾಂಕ 31.08.2025 - ವಯೋನಿವೃತ್ತಿ ದಿನಾಂಕದ ವರೆಗೆ) |
| 2. | ವ್ಯವಹಾರ ಆಡಳಿತ | ಡಾ. ಜೋಸೆಫ್ ಪಿ.ಡಿ. (MTA) |
| 3. | ವಾಣಿಜ್ಯ | ಡಾ.ಪ್ರೀತಿ ಕೀರ್ತಿ ಡಿ'ಸೋಜ |
| 4. | ಗಣಕ ವಿಜ್ಞಾನ | ಡಾ.ಮಂಜಯ್ಯ ಡಿ.ಹೆಚ್ |
| 5. | ಇಲೆಕ್ಟ್ರಾನಿಕ್ಸ್ | ಡಾ.ನವೀನ್ ಕುಮಾರ್ ಎಸ್.ಕೆ. |
| 6. | ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ | ಪ್ರೊ. ಕೃಷ್ಣ ಶರ್ಮ (ದಿನಾಂಕ 31.10.2024 - ವಯೋನಿವೃತ್ತಿ ದಿನಾಂಕದ ವರೆಗೆ) |
| 7. | ಸಂಖ್ಯಾ ಶಾಸ್ತ್ರ | ಪ್ರೊ.ವೈ.ಮುನಿರಾಜು (ಪ್ರಭಾರ) |
| 8. | ಗಣಿತ ಶಾಸ್ತ್ರ | ಡಾ.ಕಿಶೋರಿ ಪಿ. ನಾರಾಯಣ್ಕರ್ |
| 9. | ಜೀವ ರಸಾಯನ ಶಾಸ್ತ್ರ (ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ) | ಪ್ರೊ.ಕೆ.ಎಸ್.ಚಂದ್ರಶೇಖರಯ್ಯ |
| 10. | ದೈಹಿಕ ಶಿಕ್ಷಣ | ಡಾ.ಸಿ.ಕೆ. ಕಿಶೋರ್ ಕುಮಾರ್ |

**ಕಾರ್ಯಸೂಚಿ** : **ಸಿಂಡಿಕೇಟು: ಸಾ.ಸ.7:11 (2023)**

**ವಿಷಯ** : ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

**ನಿರ್ಣಯ** : ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ದಿನಾಂಕ 01.01.2024ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಈ ಕೆಳಗಿನಂತೆ ಅಧ್ಯಕ್ಷರುಗಳನ್ನು ನೇಮಕಾತಿ ಮಾಡಲಾಯಿತು.

| ಕ್ರ. ಸಂ. | ಸ್ನಾತಕೋತ್ತರ ಅಧ್ಯಯನ ವಿಭಾಗ | ಅಧ್ಯಕ್ಷರ ಹೆಸರು |
|---|---|---|
| 1. | ರಾಜ್ಯ ಶಾಸ್ತ್ರ | ಪ್ರೊ.ಪಿ.ಎಲ್.ಧರ್ಮ (ದಿನಾಂಕ 31.10.2024 - ವಯೋನಿವೃತ್ತಿ ದಿನಾಂಕದ ವರೆಗೆ) |
| 2. | ಸಾಗರ ಭೂ ವಿಜ್ಞಾನ | ಪ್ರೊ. ಬಿ.ಆರ್.ಮಂಜುನಾಥ (ಹಿರಿಯ ಶ್ರೇಣಿ) (ದಿನಾಂಕ 31.10.2024 - ವಯೋನಿವೃತ್ತಿ ದಿನಾಂಕದ ವರೆಗೆ) |
| 3. | ವಸ್ತು ವಿಜ್ಞಾನ | ಡಾ. ರಾಣಿ ಎಂ. ಪಟ್ಟಾಬಿ (ದಿನಾಂಕ 31.08.2025 - ವಯೋನಿವೃತ್ತಿ ದಿನಾಂಕದ ವರೆಗೆ) |

**ಕಾರ್ಯಸೂಚಿ** : **ಪರೀಕ್ಷಾಂಗ: ಸಾ.ಸ.7:12(2023)**

**ವಿಷಯ** : ಸೆಪ್ಟೆಂಬರ್/ಅಕ್ಟೋಬರ್ 2022ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು - ದಂಡನೆಯನ್ನು ದೃಢಪಡಿಸುವ ಬಗ್ಗೆ.

**ನಿರ್ಣಯ** : ಅನುಮೋದಿಸಲಾಯಿತು.

**ಕಾರ್ಯಸೂಚಿ** : **ಪರೀಕ್ಷಾಂಗ: ಸಾ.ಸ.7:13(2023)**

**ವಿಷಯ** : ಫೆಬ್ರವರಿ / ಮಾರ್ಚ್ 2023ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು - ದಂಡನೆಯನ್ನು ದೃಢಪಡಿಸುವ ಬಗ್ಗೆ.

**ನಿರ್ಣಯ** : ಅನುಮೋದಿಸಲಾಯಿತು.

**ಕಾರ್ಯಸೂಚಿ** : **ಹಣಕಾಸು: ಸಾ.ಸ.7:14(2023)**

**ವಿಷಯ** : ಮಂಗಳೂರು ವಿಶ್ವವಿದ್ಯಾನಿಲಯದ 2020-21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ-ಅನುಪಾಲನಾ ವರದಿಯ ಅನುಮೋದನೆ ಕುರಿತು.

**ನಿರ್ಣಯ** : ವಿಸ್ತೃತವಾಗಿ ಚರ್ಚಿಸಲಾಯಿತು. ಅನುಪಾಲನಾ ವರದಿಯ ಬಗ್ಗೆ ಪೂರಕ ದಾಖಲೆಗಳನ್ನು ಮತ್ತು ಸಮಂಜಸವಾದ ಉತ್ತರವನ್ನು ನೀಡುವಂತೆ ಸಿಂಡಿಕೇಟು ನಿರ್ಣಯಿಸಿ ಮುಂದಿನ ಸಿಂಡಿಕೇಟು ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

**ಕಾರ್ಯಸೂಚಿ** : **ಡಿಇವಿ: ಸಾ.ಸ.7:15 (2023)**

**ವಿಷಯ** : ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಮತ್ತು ಪಿ.ಎ. ಪ್ರಥಮ ದರ್ಜೆ ಕಾಲೇಜು, ಮಂಗಳೂರು ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

**ನಿರ್ಣಯ** : ಅನುಮೋದಿಸಲಾಯಿತು.

**ಕಾರ್ಯಸೂಚಿ** : **ಡಿಇವಿ: ಸಾ.ಸ.7:16 (2023)**

**ವಿಷಯ** : ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಕರ್ನಾಟಕ ಬ್ಯಾಂಕ್ ಎಟಿಎಂ ಕಟ್ಟಡಕ್ಕೆ ಪರವಾನಿಗೆ ಶುಲ್ಕ (ಅನ್ವಯವಾಗುವ ತೆರಿಗೆಯೊಂದಿಗೆ) ಮತ್ತು ಅವಧಿ ನಿಗದಿಪಡಿಸುವ ಬಗ್ಗೆ.

**ನಿರ್ಣಯ** : ಅನುಮೋದಿಸಲಾಯಿತು.

**ಕಾರ್ಯಸೂಚಿ** : **ಸಿಬ್ಬಂದಿ: ಸಾ.ಸ.7:17(2023)**

**ವಿಷಯ** : ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಕ್ಷೇಮಪಾಲನಾ ನಿರ್ದೇಶನಾಲಯಕ್ಕೆ ನಿರ್ದೇಶಕರನ್ನು ನೇಮಕ ಮಾಡಿರುವ ಬಗ್ಗೆ.

**ನಿರ್ಣಯ** : ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಕ್ಷೇಮಪಾಲನಾ ನಿರ್ದೇಶನಾಲಯಕ್ಕೆ ಡಾ.ಗಣೇಶ್ ಸಂಜೀವ್., ಮುಖ್ಯಸ್ಥರು, ಮೈಕ್ರೋಟ್ರೋನ್ ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗ - ಇವರನ್ನು ಒಂದು ವರ್ಷ ಅಥವಾ ಮುಂದಿನ ಆದೇಶದವರೆಗೆ ಪ್ರಭಾರ ನಿರ್ದೇಶಕರನ್ನಾಗಿ ನೇಮಕ ಮಾಡಿರುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು

**ಕಾರ್ಯಸೂಚಿ** : **ಡಿಇವಿ: ಸಾ.ಸ.7:18(2023)**

**ವಿಷಯ** : ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿ, ಮಾರ್ಗಸೂಚಿಯನ್ನು ರಚಿಸುವ ಬಗ್ಗೆ.

**ನಿರ್ಣಯ** : ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿ ಮಾರ್ಗಸೂಚಿ ರಚಿಸುವ ಪ್ರಸ್ತಾವನೆಗೆ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು. ಹಾಗೂ ಎಲ್ಲಾ ಡೀನರು, ಜಂಟಿ ನಿರ್ದೇಶಕರು, IQAC ನಿರ್ದೇಶಕರು ಮತ್ತು ಡಾ.ಎಸ್.ಬಿ.ಎಂ.ಪ್ರಸನ್ನ, ಸಿಂಡಿಕೇಟ್ ಸದಸ್ಯರು- ಇವರನ್ನೊಳಗೊಂಡ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು.

**<u>ಇತರ ವಿಷಯಗಳು:</u>**

1. ಡಾ. ಎಸ್.ಬಿ.ಎಂ.ಪ್ರಸನ್ನ., ಸಿಂಡಿಕೇಟು ಸದಸ್ಯರು - ಇವರ ಸೂಚನೆಯಂತೆ, ಖಾಯಂ ನೆಲೆಯಲ್ಲಿ ಬೋಧಕ ಸಿಬ್ಬಂದಿಗಳು ಇಲ್ಲದ ವಿಭಾಗಗಳಲ್ಲಿ, ಮಂಜೂರಾದ ಖಾಯಂ ಹುದ್ದೆಗಳಿಗೆ ಎದುರಾಗಿ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರನ್ನು ನೇರ ನೇಮಕಾತಿ ಮಾಡುವ ಬಗ್ಗೆ ಸರ್ಕಾರದ ಅನುಮೋದನೆ ಪಡೆದು ನೇಮಕ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.
2. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ನೆಲೆಯ ಸಿಬ್ಬಂದಿಗಳನ್ನು ಮೂರು ತಿಂಗಳ ಅವಧಿಗೆ ಬಳಸಿಕೊಂಡಿದ್ದು, ಸದರಿ ಸಿಬ್ಬಂದಿಗಳ ಪದನಾಮ ಹಾಗೂ ವೇತನ ಪಾವತಿಗೆ ಸಂಬಂಧಿಸಿ ದಿನಾಂಕ:18.10.2023ರ ಪೂರ್ವದಲ್ಲಿ ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯ ಸಿಬ್ಬಂದಿಗಳಿಗೆ ಪಾವತಿಸುತ್ತಿದ್ದ ವೇತನ ಹಾಗೂ ಪದನಾಮವನ್ನು ಈ ಮೂರು ತಿಂಗಳ ಅವಧಿಗೆ ನಿಗದಿಪಡಿಸಬಹುದೆಂದು ಸಿಂಡಿಕೇಟು ನಿರ್ಣಯಿಸಿತು.
3. ತಾತ್ಕಾಲಿಕ/ಹೊರಗುತ್ತಿಗೆ ನೇಮಕಾತಿಯ ಸಮಿತಿಗೆ ಡಾ. ಎಸ್. ಬಿ. ಎಂ. ಪ್ರಸನ್ನ, ಸಿಂಡಿಕೇಟು ಸದಸ್ಯರು ಇವರನ್ನು ಹೆಚ್ಚುವರಿ ಸದಸ್ಯರನ್ನಾಗಿ ನೇಮಕ ಮಾಡಲು ನಿರ್ಣಯಿಸಲಾಯತು.
4. ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದವರು ವಿಶ್ವವಿದ್ಯಾನಿಲಯದ ವಾಹನವನ್ನು ಖಾಸಗಿ ಉದ್ದೇಶಕ್ಕೆ ಬಳಸಿದಾಗ ಈಗಿರುವ ರೂ. 2.50ರ ಬದಲು ರೂ.5.00 ಪ್ರಯಾಣ ದರವನ್ನು ವಿಶ್ವವಿದ್ಯಾನಿಲಯದ ನಿಧಿಗೆ ಪಾವತಿಸುವಂತೆ ನಿರ್ಣಯಿಸಲಾಯಿತು.

5. ವಿಶ್ವವಿದ್ಯಾನಿಲಯದ ವಾಹನಗಳ ಲಭ್ಯತೆಯ ಮೇರೆಗೆ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಾರ್ಯಕ್ರಮ/ಉದ್ದೇಶಗಳಿಗೆ ತಗಲುವ ಪ್ರಯಾಣ ವೆಚ್ಚವನ್ನು ವಿಶ್ವವಿದ್ಯಾನಿಲಯ ನಿಧಿಗೆ ಪಾವತಿಸುವ ಷರತ್ತಿನ ಮೇರೆಗೆ ವಾಹನಗಳನ್ನು ನೀಡಲು ನಿರ್ಣಯಿಸಲಾಯಿತು.

6. ಸಿಂಡಿಕೇಟು ಸದಸ್ಯರುಗಳ ಈಗಿನ ಪ್ರಯಾಣ ಭತ್ಯೆ ರೂ. 12.00ರಿಂದ ರೂ. 16.00ಕ್ಕೆ ಹೆಚ್ಚಿಸಲು ನಿರ್ಣಯಿಸಲಾಯಿತು. ಪ್ರಯಾಣ ಭತ್ಯೆ ಪಾವತಿಸುವ ಬಗ್ಗೆ ಪರಿನಿಯಮವನ್ನು ರಚಿಸಿ, ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲು ನಿರ್ಧರಿಸಲಾಯಿತು.

ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು |